**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ10001/2022**

ಪಿಡಬ್ಲೂ–10
ಸಿಡಬ್ಲೂ– 15

ಸಾಕ್ಷಿ ಹೆಸರು – ರವಿಕುಮಾರ
ತಂದೆ ಹೆಸರು – ನರಸಿಂಹಪ್ಪ
ವಯಸ್ಸು – 35 ವರ್ಷ
ಉದ್ಯೋಗ – ವ್ಯವಸಾಯ
ವಾಸಃ – ರಿಪ್ಪನ್ ಪೇಟೆ, ಹೊಸನಗರ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ 18–07–2024**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಪ್ರಾ ಸಾ –1 , ಪ್ರಾ ಸಾ 7, ಪ್ರಾ ಸಾ – 8, ಪ್ರಾ ಸಾ –9 ಗೊತ್ತು. ಪ್ರಾ ಸಾ –1 ರವರ ಅಕ್ಕ ಪ್ರಾ ಸಾ 9 ರವರು ಸಾಗರದ ಶಾಹಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದಳು. ಪ್ರಾ ಸಾ –9 ರವರು ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುವಾಗ ಬರುವಾಗ 1 ನೇ ಆರೋಪಿ ತನ್ನನ್ನು ಪ್ರೀತಿ ಮಾಡು ಮದುವೆಯಾಗುತ್ತೇನೆ ಎಂದು ಹೇಳುವ ವಿಚಾರ ನನಗೆ ಗೊತ್ತು. ಈ ವಿಚಾರದಲ್ಲಿ ಪ್ರಾ ಸಾ – 9 ರವರ ತಂಟೆಗೆ ಬರದಂತೆ ಪ್ರಾ ಸಾ 1 ಮತ್ತು ಪ್ರಾ ಸಾ7 ರವರು 1 ನೇ ಆರೋಪಿಗೆ ಎಚ್ಚರಿಕೆ ಕೊಟ್ಟಿದ್ದರು.

ದಿನಾಂಕಃ 10–09–2019 ರಂದು ರಿಪ್ಪನ್ ಪೇಟೆಯ ಹಿಂದೂ ಮಹಾಸಭಾ ಗಣಪತಿ ವಿಸರ್ಜನಾ ಮೆರವಣಿಗೆ ಇತ್ತು ಸದರಿ ಮೆರವಣಿಗೆಯನ್ನು ನೋಡಲು ನಾನು ಹೋಗಿದ್ದೆನು. ಸದರಿ ಮೆರವಣಿಗೆ ಶಿವಮಂದಿರವನ್ನು ದಾಟಿ ಬಂದಿತ್ತು. ಆ ಸಮಯದಲ್ಲಿ ನನ್ನ ಜೊತೆಯಲ್ಲಿ ಚಾಸಾ13 ಮತ್ತು ಚಾಸಾ14 ಇದ್ದರು. ಸಂಜೆ 6–00 ರಿಂದ 6–45 ಗಂಟೆ ಸಮಯದಲ್ಲಿ ನಾನು ಪ್ರಾಸಾ –4 ರವಿ ರವರ ಅಂಗಡಿಯ ಹತ್ತಿರ ನಿಂತುಕೊಂಡಿದ್ದಾಗ ಪ್ರಾ ಸಾ –1 ಮತ್ತು ಪ್ರಾ ಸಾ 7 ರವರು ನಮ್ಮ

ಮುಂದೆ ನಡೆದುಕೊಂಡು ಹೋಗುತ್ತಿದ್ದರು. ಅವರ ಹಿಂದೆ ಆರೋಪಿತರು ಹೋಗುತ್ತಿದ್ದರು. ಫ್ರಾ ಸಾ –1 ಮತ್ತು ಫ್ರಾ ಸಾ 7 ಮತ್ತು ಆರೋಪಿತರಿಗೂ ಮಾತಿಗೆ ಮಾತು ಆಗುತ್ತಿತ್ತು. ಆಗ 1 ನೇ ಆರೋಪಿಯು ಫ್ರಾ ಸಾ –1 ರವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ. 2 ನೇ ಆರೋಪಿಯು ಫ್ರಾ ಸಾ –7 ರವರನ್ನು ಓಡಿಸಿಕೊಂಡು ಹೋಗಿ ಆತನಿಗೂ ಸಹ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ. ಆಗ ಫ್ರಾ ಸಾ 7 ರವರು ಕೂಗಿಕೊಂಡಿದ್ದು ಆಗ ನಾವು ಮತ್ತು ಜನರು ಫ್ರಾ ಸಾ1 ಮತ್ತು ಫ್ರಾ ಸಾ 7 ರವರ ಹತ್ತಿರ ಓಡಿ ಹೋಗಿರುತ್ತೇವೆ. ಆ ಸಮಯದಲ್ಲಿ ಫ್ರಾ ಸಾ –1 ರವರ ಬೆನ್ನಿನ ಮೇಲೆ ರಕ್ತ ಬರುತ್ತಿತ್ತು. ಫ್ರಾ ಸಾ 7 ರವರಿಗೆ ಹೊಟ್ಟೆ ಪಕ್ಕದಲ್ಲಿ ರಕ್ತ ಬರುತ್ತಿತ್ತು. ಆಗ ನಾವು ಅವರನ್ನು ಎತ್ತಿಕೊಂಡು ಆಸ್ಪತ್ರೆಗೆ ಸಾಗಿಸುತ್ತಿದ್ದೆವು. ಆರೋಪಿತರು ಆಗ ಪೋಲೀಸರನ್ನು ನೋಡಿ ಅಲ್ಲಿಂದ ಓಡಿ ಹೋಗಿರುತ್ತಾರೆ.

ನಂತರ ಫ್ರಾ ಸಾ 1 ಮತ್ತು ಫ್ರಾ ಸಾ 7 ರವರನ್ನು ಬೈಕಿನಲ್ಲಿ ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಆಸ್ಪತ್ರೆಯಿಂದ ಅಂಬ್ಯುಲೆನ್ಸನಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿತರು ಚಾಕುವನ್ನು ಗಲಾಟೆಯಾುಗುವ ಸಮಯದಲ್ಲಿ ಕೆಳಗೆ ಬೀಳಿಸಿರುತ್ತಾರೆ ಮತ್ತೆ ಅದನ್ನು ತೆಗೆದುಕೊಂಡು ಹೋಗಿರುತ್ತಾರೆ. ಗಲಾಟೆಯ ಸಮಯದಲ್ಲಿ ಆರೋಪಿತರು ಫ್ರಾ ಸಾ –1 ಮತ್ತು ಫ್ರಾ ಸಾ –7 ರವರಿಗೆ ಹುಡುಗಿಯ ವಿಚಾರದಲ್ಲಿ ಅವಾಚ್ಯವಾಗಿ ಬೈಯ್ಯುತ್ತಿದ್ದರು. ಆರೋಪಿತರು ಫ್ರಾ ಸಾ –1 ಮತ್ತು ಫ್ರಾ ಸಾ –7 ರವರಿಗೆ ಹೆದರಿಸಲೋ ಅಥವಾ ಕೊಲೆ ಮಾಡಲೋ ಯಾವ ಉದ್ದೇಶದಿಂದ ಚಾಕುವಿನಿಂದ ಹಲ್ಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. 1, 2, 4 ನೇ ಆರೋಪಿತರು ಇಂದು ನ್ಯಾಯಾಲಯದಲ್ಲಿ ಹಾಜರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ಗೈರು ಹಾಜರು ಇದ್ದು 3 ನೇ ಆರೋಪಿ ಪರ ವಕೀಲರು 3 ನೇ ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ನಾವು ಹೋಗುತ್ತಿದ್ದ ಸ್ಥಳದಿಂದ ಫ್ರಾ ಸಾ –1 ಮತ್ತು ಫ್ರಾ ಸಾ7 ರ ವರ ಹಿಂದೆ ಮತ್ತು ಚಾಸಾ8 ಮತ್ತು ಚಾಸಾ13 ರವರು ಹೋಗುತ್ತಿದ್ದರು ಎಂದರೆ ಬಹಳ ಜನ ಇದ್ದದ್ದರಿಂದ ನಾನು ನೋಡಲಿಲ್ಲ ಕಾರಣ ದೂರದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಆರೋಪಿತರು ಫ್ರಾ ಸಾ 1 ಮತ್ತು ಫ್ರಾ ಸಾ 7 ರವರನ್ನು ಕೆಳಗೆ ಕೆಡವಿದರು ಎಂದರೆ ಹೌದು. ನಾನು ನೋಡುತ್ತಿದ್ದ ಹಾಗೆ 1 ನೇ ಆರೋಪಿ ಫ್ರಾ ಸಾ 1 ರವರನ್ನು ಹಿಡಿದುಕೊಂಡು ನನಗೇ ವಾರ್ನ್ ಮಾಡುತ್ತೀಯಾ ಎಂದು ಚಾಕುವಿನಿಂದ ಫ್ರಾ ಸಾ –1 ರವರ ಎದೆಗೆ ಚುಚ್ಚಿದನು ಎಂದರೆ ಚಾಕುವಿನಿಂದ ಚುಚ್ಚುವುದನ್ನು ನೋಡಿಲ್ಲ ಆದರೆ ಹೊಡೆಯುವುದನ್ನು ನೋಡಿರುತ್ತೇನೆ. 2 ನೇ ಆರೋಪಿ ಫ್ರಾ ಸಾ7 ರವರ ಎಡ ಹೊಟ್ಟೆ, ಎಡ ಪಕ್ಕೆಯ ಹತ್ತಿರ ಚುಚ್ಚಿದ್ದು ಫ್ರಾ ಸಾ 7 ತಪ್ಪಿಸಿಕೊಳ್ಳಲು ತಿರುಗಿದಾಗ ಚಾಕುವಿನಿಂದ ಚುಚ್ಚಿರುತ್ತಾನೆ ಎಂದರೆ ಹೌದು. 3 ಮತ್ತು 4 ನೇ ಆರೋಪಿತರು ಫ್ರಾ ಸಾ1 ಮತ್ತು ಫ್ರಾ ಸಾ7 ರವರನು ಕೊಲೆ ಮಾಡಿ ಎಂದು ಜೋರಾಗಿ ಹೇಳುತ್ತಿದ್ದರು ಮತ್ತು ಫ್ರಾ ಸಾ1 ಮತ್ತು ಫ್ರಾ ಸಾ7 ರವರಿಗೆ ಕಾಲಿನಿಂದ ಒದೆಯುತ್ತಿದ್ದರು ಎಂದರೆ ಹೌದು. 1 ನೇ ಆರೋಪಿಯು ಫ್ರಾ ಸಾ1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಉಳಿದ ಆರೋಪಿತರೊಂದಿಗೆ ಸೇರಿ ಫ್ರಾ ಸಾ –1 ಮತ್ತು ಫ್ರಾ ಸಾ7 ರವರಿಗೆ ಚುಚ್ಚಿರುತ್ತಾನೆ ಎಂದರೆ ಹೆದರಿಸಲು ಆ ರೀತಿ ಮಾಡಿರಬಹುದು ಕೊಲೆ ಮಾಡುವ ಉದ್ದೇಶ ಇರಲಿಲ್ಲ ಎಂದು ನುಡಿಯುತ್ತಾರೆ. ಪೋಲೀಸರ ಮುಂದೆ ನನ್ನ ಹೇಳಿಕೆಯಲ್ಲಿ 1 ಮತ್ತು 2 ನೇ ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಹೌದು.

**<u>ಪಾಟೀ ಸವಾಲುಃ 2 ನೇ ಆರೋಪಿತನ ಪರ ವಕೀಲರಿಂದಃ</u>**

ನಾನು ಎಂ.ಎ. ಓದಿರುತ್ತೇನೆ . ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಗಣಪತಿ ಮೆರವಣಿಗೆಯು ಶಿವಮೊಗ್ಗ ಬಿಟ್ಟರೆ ರಿಪ್ಪನ್ ಪೇಟೆಯಲ್ಲಿ ಜೋರಾಗಿ ನಡೆಯುತ್ತದೆ ಎಂದರೆ ಹೌದು. ಸದರಿ ಮೆರವಣಿಗೆಯಲ್ಲಿ 2 ರಿಂದ 3 ಸಾವಿರ ಜನ ಸೇರುತ್ತಾರೆ ಎಂದರೆ ಹೌದು. ಸದರಿ ಜನಕ್ಕೆ ತಕ್ಕಂತೆ ಪೋಲೀಸರು ಡ್ಯೂಟಿ ಮಾಡುತ್ತಾರೆ ಎಂದರೆ ಹೌದು. ಪೋಲೀಸರು ಮೆರವಣಿಗೆ ಸಮಯದಲ್ಲಿ ವೀಡಿಯೋ ಮಾಡುತ್ತಾರೆ ಎಂದರೆ ಆ ಸಮಯದಲ್ಲಿ ವೀಡಿಯೋ ಇರಲಿಲ್ಲ. ಆ ಸಮಯದಲ್ಲಿ ಸಿ ಸಿ

ಕ್ಯಾಮೇರಾ ಇಟ್ಟಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವೀಡಿಯೋ ಮಾಡುತ್ತಿದ್ದರು ಮತ್ತು ಸಿ ಸಿ ಕ್ಯಾಮೇರಾ ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಫ್ರಾ ಸಾ7 ನನ್ನ ಅಕ್ಕನ ಮಗ. ಫ್ರಾ ಸಾ –1 , ಫ್ರಾ ಸಾ7 ಫ್ರಾ ಸಾ8 ಮತ್ತು ಫ್ರಾ ಸಾ9 ನನ್ನ ಅಕ್ಕಪಕ್ಕದ ಮನೆಯವರು ಎಂದರೆ ಹೌದು. 1 ನೇ ಆರೋಪಿ ಫ್ರಾ ಸಾ 9 ರವರನ್ನು ಪ್ರೀತಿ ಮಾಡುವ ವಿಚಾರವನ್ನು ನನ್ನ ಅಕ್ಕನ ಮಗ ಫ್ರಾ ಸಾ 7 ತಿಳಿಸಿರುತ್ತಾನೆ. ಈ ವಿಚಾರವನ್ನು ನನ್ನ ಅಕ್ಕನ ಮಗ ಫ್ರಾ ಸಾ 7 ನನಗೆ ತಿಳಿಸಿರುತ್ತಾನೆ.

ಸದರಿ ದಿನ ಗಣಪತಿ ಮೆರವಣಿಗೆಯಲ್ಲಿ ತುಂಬಾ ಜನ ಇದ್ದರು ಎಂದರೆ ಗಣಪತಿ ಮೆರವಣಿಗೆ ಮುಂದೆ ಹೋದ ಕಾರಣ ಆ ಸಮಯದಲ್ಲಿ ಅಷ್ಟು ಜನ ಇದ್ದರು ಎಂದು ನುಡಿಯುತ್ತಾರೆ. ಫ್ರಾ ಸಾ –1 ಮತ್ತು ಫ್ರಾ ಸಾ7 ರವರಿಗೆ ಚಾಕು ಹಾಕಿದ್ದನ್ನು ಖುದ್ದು ನೋಡಿಲ್ಲ ಎಂದರೆ ಜನ ಜಾಸ್ತಿ ಇದ್ದ ಕಾರಣ ನಾನು ಖುದ್ದಾಗಿ ನೋಡಿಲ್ಲ. ಆರೋಪಿತರು ಫ್ರಾ ಸಾ –1 ಮತ್ತು ಫ್ರಾ ಸಾ7 ರವರಿಗೆ ಹೊಡೆದಿದ್ದು ಮತ್ತು ಸದರಿಯವರು ಆರೋಪಿತರರಿಗೆ ಹೋಡೆದ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಹೌದು. 2 ನೇ ಆರೋಪಿ ಕ್ರಿಶ್ಚಿಯನ್ ಆದ ಕಾರಣ ಗಣಪತಿ ವಿಸರ್ಜನೆ ಕಾರ್ಯಕ್ರಮದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಗಲಾಟೆ ಆಗಿಲ್ಲ,ನಾನು ಸ್ಥಳದಲ್ಲಿ ಇರಲಿಲ್ಲ ನಾನು ಗಲಾಟೆಯನ್ನು ನೋೀಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ10 ರವರು ನನಗೆ ಸಂಬಂಧಿಯಾದ ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಕು ಅಲ್ಲೇ ಬಿದ್ದಿತ್ತು ಚಾಕುವನ್ನು ಆರೋಪಿತರು ಆ ಮೇಲೆ ಬಂದು ತೆಗೆದುಕೊಂಡು ಹೋದರು ಎಂದು ನನ್ನ ಹೇಳಿಕೆಯಲ್ಲಿ ಹೇಳಲಿಲ್ಲ ಎಂದರೆ ಹೌದು.

ಸೆಪ್ಟಂಬರ್ ತಿಂಗಳಲ್ಲಿ ಮಳೆಗಾಲ ಆದ ಕಾರಣ ಕತ್ತಲೆ ಬೇಗ ಆಗುತ್ತದೆ ಎಂದರೆ ಹೌದು. ಆರೋಪಿತರು ಯಾರೂ ಹೊಡೆದಿಲ್ಲ , ಬೈದಿಲ್ಲ , ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿತನ ಪರ ವಕೀಲರಿಂದಃ**

ಫ್ರಾ ಸಾ –1 ಮತ್ತು ಫ್ರಾ ಸಾ 7 ರವರು ನನಗೆ ನಾನು ಸಣ್ಣವನಿದ್ದಾಗಿನಿಂದಲೂ ಪರಿಚಯ ಇರುತ್ತಾರೆ. ಫ್ರಾ ಸಾ –1 ಮತ್ತು ಫ್ರಾ ಸಾ –7 ರವರನ್ನು ರಿಪ್ಪನ್ ಪೇಟೆ ಆಸ್ಪತ್ರೆಗೆ ಬೈಕ್ ಮೇಲೆ ಕರೆದುಕೋಂಡು ಹೋಗಿರುತ್ತೇವೆ. ಅವರಿಬ್ಬರಿಗೂ ಬೈಕ್ ನಲ್ಲಿ ಹೋಗುವಾಗ ಪ್ರಜ್ಞೆ ಇತ್ತು. ರಿಪ್ಪನ್ ಪೇಟೆ ಆಸ್ಪತ್ರೆಯಲ್ಲಿ ಫ್ರಾ ಸಾ –1 ಮತ್ತು ಫ್ರಾ ಸಾ –7 ರವರಿಗೆ ಪ್ರಥಮ ಚಿಕಿತ್ಸೆ ನೀಡಿರುತ್ತಾರೆ. ಫ್ರಾ ಸಾ –1 ಮತ್ತು ಫ್ರಾ ಸಾ –7 ರವರನ್ನು ಆಸ್ಪತ್ರೆಗೆ ದಾಖಲು ಮಾಡುವಾಗ ನಾನು ನನ್ನ ಹೆಸರನ್ನು

ಮತ್ತು ಪ್ರಾ ಸಾ –1 ರವರ ಅಕ್ಕನ ಗಂಡನ ಹೆಸರನ್ನು ಕೊಟ್ಟಿರುತ್ತೇವೆ. ಪ್ರಾ ಸಾ –1 ರವರ ಅಕ್ಕನ ಗಂಡನ ಹೆಸರು ನನಗೆ ಗೊತಿತಲ್ಲ. ಮೆಗ್ಗಾನ್ ಆಸ್ಪತ್ರೆಗೆ ಹೋದಾಗ ಸಮಯ ರಾತ್ರಿ 7–30 ಗಂಟೆ ಆಗಿತ್ತು. ಆ ದಿನ ಗಣಪತಿ ಮೆರವಣಿಗೆ ಆಗಿ ವಾಪಾಸ್ಸು ಹೋಗುತ್ತಿತ್ತು. ಘಟನೆ ಸಮಯದಲ್ಲಿ 20–30 ಜನರು ಇದ್ದರು. ಆ ಸಮಯದಲ್ಲಿ ಪೋಲೀಸರು ಇದ್ದರು ಎಷ್ಟು ಜನ ಪೋಲೀಸರು ಇದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಗಣಪತಿ ಕಮಿಟಿಯವರು ಯಾರೂ ಇರಲಿಲ್ಲ. ಪ್ರಾ ಸಾ – 1 ರವರಿಗೆ ಘಟನೆ ಸಮಯದಲ್ಲಿ ಎಚ್ಚರ ತಪ್ಪಿದ ವಿಚಾರ ನನಗೆ ಗೊತ್ತಿಲ್ಲ. ನಾನು ಪ್ರಾ ಸಾ 7 ರವರನ್ನು ನನ್ನ ಬೈಕಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ.

ಚಾಸಾ–10 ರವರಿಂದ ನಾನು ಈ ಘಟನೆಗೆ ಸಂಬಂಧಪಟ್ಟಂತೆ 1 ನೇಆರೋಪಿ ಪ್ರಾ ಸಾ–7 ರವರನ್ನು ಪ್ರೀತಿಸುವ ಬಗ್ಗೆ ವಿಚಾರವನ್ನು ಪೋಲೀಸರ ಮುಂದೆ ನಾನು ಹೇಳಲಿಲ್ಲ. ಘಟನೆಯಾದಾಗ ನಾನು 50 ರಿಂದ 60 ಅಡಿ ದೂರದಲ್ಲಿ ಇದ್ದೆ. ಆಸ್ಪತ್ರೆಯಿಂದ ನಾನು ಮನೆಗೆ ವಾಪಾಸ್ ದಿನಾಂಕಃ 11–09–2019 ರಂದು ನಾನು ಒಬ್ಬನೇ ಬಂದಿರುತ್ತೇನೆ. ಎಷ್ಟು ಗಂಟೆಗೆ ಬಂದೆ ಎಂದು ಸಮಯ ಗೊತ್ತಿಲ್ಲ. ಪೋಲೀಸರ ಮುಂದೆ ಹೇಳಿಕೆ ಕೊಡುವಾಗ ನಾನು ಒಬ್ಬನೇ ಇದ್ದೆನು. ಆ ದಿನ ನನ್ನ ಜೊತೆ ಚಾ ಸಾ 4 ರವರು ನನ್ನ ಜೊತೆ ಬಂದಿಲ್ಲ.

ಪೋಲೀಸರ ಮುಂದೆ ನಾನು ಪ್ರಾ ಸಾ –1 ಮತ್ತು ಪ್ರಾ ಸಾ –7 ರವರನ್ನು ರಿಪ್ಪನ್ ಪೇಟೆ ಆಸ್ಪತ್ರೆಗೆ ನಂತರ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಪೋಲೀಸರು ಕೇಳಲಿಲ್ಲ ನಾನು ಹೇಳಲಿಲ್ಲ ಎಂದು ನುಡಿಯುತ್ತಾರೆ. ರಿಪ್ಪನ್ ಪೇಟೆ ಆಸ್ಪತ್ರೆಯಿಂದ ಪ್ರಾ ಸಾ –1 ಮತ್ತು ಪ್ರಾ ಸಾ –7 ರವರನ್ನು ಶಿವಮೊಗ್ಗ ಆಸ್ಪತ್ರೆಗೆ ಬೇರೆಯವರು ಕರೆದುಕೊಂಡು ಹೋಗಿ ದಾಖಲಿಸಿದ್ದಾರೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಹೌದು. ನಾನು ಹೇಳಿದ ರೀತಿಯಲ್ಲಿ ಪೋಲೀಸರ ಮುದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದೂರ ಇದ್ದ ಕಾರಣ ಯಾರು ಏನು ಅಂದರು , ಯಾರು ಏನು ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ ಎಂದರೆ ಹೌದು. ಪ್ರಾ ಸಾ –1 ರವರು ನಮ್ಮ ಪಕ್ಕದ ಮನೆಯವರು ಮತ್ತು ನನ್ನ ಸ್ನೇಹಿತರಾದ ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಆರೋಪಿತರು ಯಾರೂ ಆ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮುಂದೆ ಎಷ್ಟು ಗಂಟೆಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದು ಸಮಯ ಗೊತ್ತಿಲ್ಲ. ಪೋಲೀಸರ ಮುಂದೆ ನೀಡಿದ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿಲ್ಲ. ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿತನ ಪರ ವಕೀಲರಿಂದಃ**

1 ಮತ್ತು 3 ನೇ ಆರೋಪಿ ಪರ ವಕೀಲರು ಉಳಿದ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತುಗಳನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಸೀಲುಗಳನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತುಗಳ ಸೀಲ್ ಬಿಚ್ಚಿ ತೆರೆಯಲಾಯಿತು)

(ಈ ದಿನ ಆರೋಪಿತನು ನ್ಯಾಯಾಲಯದ ಮುಂದೆ ಹಾಜರಿಲ್ಲ. ಆರೋಪಿತನ ಪರ ವಕೀಲರು ಆರೋಪಿತನನ್ನು ಗುರುತಿಸುವಿಕೆಯ ಬಗ್ಗೆ ತಕಾರಾರು ಇಲ್ಲವೆಂದು ಹೇಳುತ್ತಾರೆ)

ಆರೋಪಿತರ ವಿರುದ್ಧ ಸಾಕಷ್ಟು ಪುರಾವೆಗಳು ಇದ್ದುದರಿಂದ ಅವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನನ್ನ ತನಿಖೆಯಲ್ಲಿ ಆರೋಪಿತರದ್ದು ಯಾವುದೇ ತಪ್ಪು ಕಂಡು ಬರದಿದ್ದರೂ ನಾನು ಅವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ.

ನನ್ನ ತನಿಖೆಯ ಸಮಯದಲ್ಲಿ ತೆಗೆದ ಪೋಟೋಗಳನ್ನು ಸಿ.ಡಿ.ಗೆ ಅಳವಡಿಸಿ ಹಾಜರುಪಡಿಸಿದ್ದು ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂಃ 62 ಬಿ ಅಡಿಯಲ್ಲಿ ಒಂದು ದೃಢೀಕರಣ ಪತ್ರವನ್ನು ಸಹ ನೀಡಿರುತ್ತೇನೆ. ಈ ಬಗ್ಗೆ ಸಿ.ಡಿ. ತಯಾರಿಸಿ ಹಾಜರುಪಡಿಸಿದ್ದು, ಸದರಿ ಸಿ.ಡಿ.ಯನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಸದರಿ ದೃಢೀಕರಣ ಪತ್ರವನ್ನು ನಿಪಿ-20 ಎಂದು ಗುರುತಿಸಲಾಯಿತು. ನಿಪಿ-20 ಅ ನನ್ನ ಸಹಿ. ದಿನಾಂಕಃ 04-04-2019 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕಷ್ಟು ಪುರಾವೆಗಳು ಇದ್ದುದರಿಂದ ಅವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

IN THE COURT OF 5TH ADDL. DISTRICT & SESSIONS JUDGE,
SHIVAMOGGA (SITTING AT SAGAR)

SC No. 10017/2021

PW –12

CW –7

| | | |
|---|---|---|
| Name | : | Dr. Suchitra |
| Husband Name | : | Dr. Lolith |
| Age | : | 3 years<br>2 |
| Occupation | : | Gynacologist, MCH Hospital, Sagar |
| Residence | : | Sagar |

Oath is duly administered on 16-04-2022

Chief Examination by Spl. Public Prosecutor:-

Since, 2019 I have been working as a Gynacologist in MCH Hospital, Sagar.

On 11-10-2019 at about 5.00 p.m. WHC Lalitha 3199 of Sagar Rural Police station has produced the victim , aged about 28 years under the history of Sexual assault in connection with Crime No. 346/2019 of Sagar Rural Police Station. On examination I found the old healed scar on dorsal surface of elbow joint . On physical examination there was no external injuries all over the body and for last menstrual period was on 02-10-2019. On local genital examination there was no fresh injuries and swab, Pubic hair , Nails, clothes (panty) were taken for sending FSL examination .

I am of the opinion that :

1. There are no signs of suggestive of recent sexual intercourse into vagina / anus and oral cavity .

2. She is used to the act like that of sexual intercourse into vagina.

I have issued medical examination report accordingly. Now I see the said medical report and the same is marked as Ex.P. 22 and Ex.P22(a) is my signature.

Cross examination by Sri. SNM Advocate for accused :

If the intercourse is taken within 5-7 days then we can recognize as a recent sexual intercourse. Hymen rapture was there and it was a old rapture. The age of the Hymen

rapture cannot be found out. The victim is used to the act of sexual intercourse. According to me there was no recent sexual injuries.

Re Examination: Nil.

(The evidence is recorded in the open Court as per my dictation).

(R. O.& I. E.)

V Addl. District &

Sessions Judge,

Shivamogga (Sitting at

Sagar).